ಶ್ರೀ ಬಿ. ಬೈರಪ್ಪಾಜಿ.—ಸರ್ಕಾರದವರೇ ಒಂದು ಪ್ರತ್ಯೇಕ ಪ್ರಿಂಟಿಂಗ್ ಪ್ರೆಸ್ಸನ್ನು ಇಟ್ಟು ಪಠ್ಯ ಪುಸ್ತಕಗಳನ್ನು ಒದಗಿಸುವುದಕ್ಕಾಗುವದಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಅವಶ್ಯ ಪ್ರಯತ್ನ ಮಾಡಲಾಗುತ್ತಿದೆ.

Sri K. LAKKAPPA.—When the work of printing the text books was entrusted to the private enterprise, why Government has not taken any action for the delay against them ?

ಶ್ರೀ ಎಸ್. ಆರ್. ಕಂಠಿ.—ಅಕ್ಷನ್ ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಎನ್. ಮಾವಪ್ಪ ಗೌಡ.—ಆ ಪ್ರಿಂಟಿಂಗ್ ಪ್ರೆಸ್ ಈಗ ಹುಬ್ಬಳ್ಳಿಗೋ ಏನೋ ಹೋಗುತ್ತಿದೆ ಎನ್ನುತ್ತಿದ್ದಾರೆ ಆದರ ಸಮಾಚಾರವೇನು ?

ಶ್ರೀ ಎಸ್. ಆರ್. ಕಂಠಿ.—ಅದು ಎಲ್ಲಿ ಇರಬೇಕೋ ಅಲ್ಲಿಯೇ ಇರುತ್ತದೆ.

ಒಟ್ಟು ಮಾತ್ಯ ಸದಸ್ಯರು.—ಪ್ರತಿಯೊಂದು ಜಿಲ್ಲೆಗೂ ಪ್ರತ್ಯೇಕ ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಿಸುವುದರ ಬದಲು ಇಡೀ ರಾಜ್ಯಕ್ಕೆಲ್ಲಾ ಒಂದೇ ಪಠ್ಯ ಪುಸ್ತಕ ಇರುವಂತೆ ಮಾಡುವುದಕ್ಕೇ ಕಾಗುವುದಿಲ್ಲ ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Sri S. R. KANTHI.—The point at issue is that no publisher in our state is able to supply books for the entire State and that is why we have to divide the entire State into 14 zones. It is not district-wise ; it is zonal-wise. It is not possible for a single publisher to supply books to the entire State.

ಶ್ರೀ ಕೆ. ಲಕ್ಕಪ್ಪ.—ಬೇರೆ ಬೇರೆ ಜಿಲ್ಲೆಗಳಿಗೆ ಬೇರೆ ಬೇರೆ ಪಠ್ಯ ಪುಸ್ತಕಗಳಿರುವುದರಿಂದ ಅಧಿಕಾರಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಎರಡು-ಮೂರು ತಿಂಗಳಿಗೊಮ್ಮೆ ವರ್ಗ ಮಾಡುವುದರಿಂದ ಅವರಿಗೆಷ್ಟು ಅನಾನುಕೂಲವಾಗುತ್ತದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Mr. SPEAKER.—The question relates to supply of text books in Tumkur District to the school children, and the supplementary is, " why do you transfer so frequently officers in Tumkur District ".

Sri K. LAKKAPPA.—The answer given by the Hon'ble Minister refers to the entire State ; the entire District has been divided and the text books have also been prescribed in a different manner. Therefore, that question arose.

Mr. SPEAKER.—Who divided and which District ? Transfers do not come under supplementaries. It is a good point for a fresh question.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಕಾಲಕ್ಕೆ ಪಠ್ಯ ಪುಸ್ತಕಗಳನ್ನು ಒದಗಿಸದಿದ್ದ ಖಾಸಗೀ ಪ್ರೆಸ್ಸಿನವರ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುವುದೆಂದು ಹೇಳೋಣಾಯಿತು. ಹಾಗೆ ಇಲ್ಲಿಯ ವರಗೂ ಎಷ್ಟು ಜನರ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿದೆ ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರವನ್ನು ಒದಗಿಸಲಾಗುವುದು.

Roads taken over by the P.W.D.

*Q.—162. Sri S. KARIAPPA (Kanakapura).—

Will the Government be pleased to state :—

(*a*) the names of new roads in the Bangalore District that have been taken over by the P.W.D. during the last three years (Taluk-wise details may be furnished) ;

(*b*) the length of each of those roads ?

A.—Sri G. B. SHANKAR RAO (Parliamentary Secretary to the Minister for Public Works).—

(*a*) and (*b*) *Vide* statement appended.

STATEMENT

Sl. No.	Name of road taken over to P.W.D. during the last three years.	Length	Name of Taluk.
		M.F.	
1	Channamanahalli to Bannikuppe *via* Chikkahalli and Vibhuthikere.	5-0	Ramanagaram
2	Sathanur to Somanakere road. ...	5-0	Kanakapura
3	Approach road to red granite quarry from 31st mile of Bangalore—Magadi Huliyurdurga Road.	4-0	Magadi
4	Magadi—Narasandra Road *via* Thaggikuppe.	12-0	Magadi
5	Road from Aero-Engine Factory to H.A.L. *via* Vibhuthipura and Kuggadasapal i.	3-4	Bangalore South.
6	Mailsandra—Patnagere road leading from Bangalore—Mysore road 8th mile connecting Kengeri.	2-2	Bangalore South.
7	Bangalore—Cuddapa link road in Hoskote Town. ...	1-5	Hoskote
8	Sulebele—Malur link road. ...	0-6	Hoskote
9	Link road connecting Bangalore—Koratagere road and Bangalore—Yelekyathanahalli road in Heggunda.	2-0	Nelamangala
10	I. V. C. road from Yedahal in Nelamangala-Doddaballapura road to Makali at 12th mile of Tumkur—Bangalore road.	7-0	Nelamangala
11	Konanakunte to Gottigere. ...	3-4	Nelamangala

ಶ್ರೀ ಎಸ್. ಕರಿಯಪ್ಪ.—ನನ್ನ ಪ್ರಶ್ನೆಗೆ ಸಂಬಂಧವಾಗಿ ಕರಿಷಿಸ್ಮದಲ್ಲಿ ಕೊಟ್ಟಿರತಕ್ಕ ರಸ್ತೆಗಳನ್ನು ರೋಕೋಪಯೋಗಿ ಇಲಾಖೆಯವರು ವಹಿಸಿಕೊಂಡ ಮೇಲೆ ಮತ್ತೊಂದು ಪಟ್ಟಿಯನ್ನು ಸರ್ಕಾರದವರು ತಯಾರು ಮಾಡಿದ್ದಾರ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—ಹೌದು, ತಯಾರು ಮಾಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಆ ಪಟ್ಟಿಯಲ್ಲಿ ಯಾವ್ಯಾವ ತಾಲ್ಲೂಕುಗಳಲ್ಲಿ ಯಾವ್ಯಾವ ರಸ್ತೆಗಳು ಸೇರಿವೆ ಎಂಬುದನ್ನು ಹೇಳುವ ಧಕ್ಕೆ ಸಾಧ್ಯವೇ ?

ಶ್ರೀ ಜಿ. ಬಿ. ಶಂಕರರಾವ್.—ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಪಟ್ಟಿ ಇದೆ. ಆದರೆ ಅದು ತಾಲ್ಲೂಕುವಾರು ಇಲ್ಲ. ಮಾನ್ಯ ಸದಸ್ಯರಿಗೆ ಆ ಪಟ್ಟಿ ಬೇಕಾದರೆ ಕೊಡಲಾಗುತ್ತದೆ.

ಶ್ರೀ ಬಿ. ಜೆ. ಲಿಂಗೇಗೌಡ.—ಈಗ ಈ ಪಟ್ಟಿಯಲ್ಲಿ ಕೊಟ್ಟಿರತಕ್ಕ ರಸ್ತೆಗಳ ಪೈಕಿ ಚನ್ನಪಟ್ಟಣಕ್ಕೆ ಸಂಬಂಧಪಟ್ಟ ಹಾಗೆ ಯಾವ ರಸ್ತೆಯನ್ನೂ ಇದರಲ್ಲಿ ಸೇರಿಸಿಲ್ಲ. ಅಂದಮೇಲೆ ಆ ರೀತಿ ಸೇರಿಸಿ ಕೊಳ್ಳುವುದು ಯಾವುದೂ ಇಲ್ಲವೆಂದು ಬಿಟ್ಟಿದ್ದಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಪಿ.ಡಬ್ಲ್ಯೂ.ಡಿ. ಇಲಾಖೆಯ ತಾಬಾಕ್ಕೆ ತೆಗೆದುಕೊಳ್ಳುವ ಯಾವ ರಸ್ತೆಯೂ ಇಲ್ಲವೆಂದಲ್ಲ. ರಸ್ತೆಗಳನ್ನು ರೂರಲ್ ಏರಿಯಾ ದಲ್ಲಿ ಸರ್ಕಾರದ ಖರ್ಚಿಗೆ ತೆಗೆದುಕೊಳ್ಳುವಾಗ ಕಮರ್ಷಿಯಲ್ ಮತ್ತು ಇಕನಾಮಿಕ್ ಪ್ರೊಸಿಪನ್ ನೋಡಿಕೊಂಡು ಮಾಡುತ್ತೇವೆ. ಮಾನ್ಯ ಸದಸ್ಯರಿಂದ ಇಂತಹ ರಸ್ತೆಯನ್ನು ತೆಗೆದುಕೊಳ್ಳ ಬೇಕೆ ದು ರೆಪ್ರಸೆಂಟೇಷನ್ ಬಂದರೆ ಅದನ್ನು ವಿಚಾರಮಾಡುತ್ತೇವೆ. ಆದರೆ ಅಲ್ಲಿ ಅಂತಹ ಮಹತ್ವಪೂ ರಸ್ತೆ ಇಲ್ಲವಾದ್ದರಿಂದ ತೆಗೆದುಕೊಳ್ಳುವುದಕ್ಕಾಗಲಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ಸೇರಿಸಿ ಕೊಂಡ ಉದ್ದೇಶವೇನು ? ಆ ರೀತಿ ಸೇರಿಸಿಕೊಂಡಾದ ಮೇಲೆ ಅವು ಈಗ ಉತ್ತಮ ಸ್ಥಿತಿಯಲ್ಲವೆಯೇ, ಆ ರಸ್ತೆಗಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆ ?

ಶ್ರೀ ಜಿ. ಬಿ. ಶಂಕರರಾವ್.—1962-63ರಿಂದ ಇಲ್ಲಿಯವರೆಗೂ ಎಷ್ಟು ಹಣ ಖರ್ಚಾಗಿದೆ ಯೆಂಬುದನ್ನು ನಾನು ನೋಡಿ ಹೇಳಬೇಕಾಗುತ್ತದೆ. ರಸ್ತೆಗಳನ್ನು ಅಭಿವೃದ್ಧಿ ಮಾಡುವ ಉದ್ದೇಶ ದಿಂದಲೇ ಲೋಕೋಪಯೋಗಿ ಇಲಾಖೆಯವರು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದು.

ಶ್ರೀ ಬಿ. ಚನ್ನಬೈರೇಗೌಡ.—ಅದಕ್ಕೋಸ್ಕರ ಖರ್ಚುಮಾಡಿರುವ ಹಣದಿಂದ ಏನಾದರೂ ರಸ್ತೆಗಳನ್ನು ಅಭಿವೃದ್ಧಿ ಮಾಡಿದ್ದಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಸಾಧ್ಯವಾದಮಟ್ಟಿಗೆ ವರ್ಷೇ ವರ್ಷೇ ಅವನ್ನು ಅಭಿವೃದ್ಧಿ ಮಾಡುತ್ತಿದ್ದೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಚನ್ನಪಟ್ಟಣದ ತಾಲ್ಲೂಕು ರಸ್ತೆಗಳು ಬಹಳವಾಗಿ ಕೆಟ್ಟು ಹೋಗಿವೆ. ಆದಕ್ಕೋಸ್ಕರ ಲೋಕೋಪಯೋಗಿ ಇಲಾಖೆಯವರು ಅಲ್ಲಿನ ರಸ್ತೆಗಳನ್ನು ಸೇರಿಸಿ ಕೊಳ್ಳಬೇಕೆಂದು ಪದೇಪದೇ ಮನವಿಗಳು ಸರ್ಕಾರಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಪದೇ ಪದೇ ಮನವಿಗಳು ಸರ್ಕಾರಕ್ಕೆ ಸಲ್ಲಿಸಿರುವುದು ಸರ್ಕಾ ರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಈಗ ಆ ಸೂಚನೆಯನ್ನು ಕೊಡುತ್ತಿದ್ದಾರೆ. ಅದನ್ನು ಸರ್ಕಾರದವರು ಆಲೋಚನೆ ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ಐದು ಮೈಲಿಗಳಿಗಿಂತ ಕಡಿಮೆ ರಸ್ತೆಗಳು ಇರತಕ್ಕ ತಾಲ್ಲೂಕುಗಳಲ್ಲಿ ಆ ರಸ್ತೆಗಳ ನಿರ್ವಹಣೆ ಕಾರ್ಯವನ್ನು ೫ ಮೈಲಿಯವರೆಗೂ ಖರ್ಚು ಮಾಡುತ್ತೇ ವೆಂದು ಸರ್ಕಾರದವರು ಅಪ್ಪಣೆ ಕೊಡಿಸಿದ್ದರು. ಆ ಬಗ್ಗೆ ಈ ವರ್ಷವಾದರೂ ತಕ್ಕ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಆ ರೀತಿ ಸರ್ಕಾರದವರು ಅಪ್ಪಣೆ ಕೊಡಿಸಿಲ್ಲ. ಐದು ಮೈಲಿಗಳ ರಸ್ತೆ ಕಾಮಗಾರಿ ಮಾತ್ರ ತೆಗೆದುಕೊಳ್ಳಬೇಕೆಂದಲ್ಲ. ಐದು ಮೈಲಿಗಳಿಗಿಂತ ಹೆಚ್ಚು ಅಥವಾ ಕಡಿಮೆ ತೆಗೆದುಕೊಂಡಂಥ ರಸ್ತೆಗಳೂ ಇವೆ. ರಸ್ತೆಗಳ ಮಹತ್ವ ನೋಡಿಕೊಂಡು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಈಗಿನ ಪಟ್ಟಿ ತಯಾರಾದ ಮೇಲೆ ಮತ್ತೊಂದು ಪಟ್ಟಿಯನ್ನು ತಯಾರುಮಾಡಿ ಇಂತಿಂಥ ರಸ್ತೆಗಳನ್ನು ಇಂತಿಂಥ ತಾಲ್ಲೂಕುಗಳಲ್ಲಿ ತೆಗೆದುಕೊಂಡಿದ್ದೇವೆಂಬ ಪಟ್ಟಿಯನ್ನು ಈಗಲೇ ಸಂಬಂಧಪಟ್ಟ ಇಂಜನಿಯರಿಂಗ್ ಡಿವಿಜನ್ನುಗಳಿಗೆ ಕಳುಹಿಸಿಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—ಕಳುಹಿಸಿದ್ದೇವೆ. ಆ ಪಟ್ಟಿಯೂ ಇದೆ. ಅದು ಮಾನ್ಯ ಸದಸ್ಯರಿಗೆ ಬೇಕಾದರೆ ಕೊಡುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಆ ಪಟ್ಟಿಯನ್ನು ಕೊಡದೆ ಹಳೆಯ ಪಟ್ಟಿಯನ್ನು ಇಲ್ಲಿ ಕೊಡುವುದಕ್ಕೆ ಕಾರಣವೇನ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಕೇಳಿದ ಪಟ್ಟಿಯನ್ನು ಸರ್ಕಾರದವರು ಕೊಟ್ಟಿದ್ದಾರೆ.